ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಅವರ ಜೊತೆ ಮಾತನಾಡಿದ್ದೇನೆ. 179 ಲಕ್ಷ ರೂ. ಇದ್ದುದ್ದನ್ನು 150 ರೂ. ಗೆ ಕಟ್ ಮಾಡಿದರು. ಆ 179 ಲಕ್ಷ ರೂ. ಸಾಲುವುದಿಲ್ಲ. ತಮಗೆ ಗೊತ್ತಿದೆ. ಜುಲೈ ಕೊನೆಯವರೆಗೂ ನಮ್ಮಲ್ಲಿ ಇರುತ್ತದೆ. ಅದು ಎಷ್ಟೇ ಇರಲಿ, ನೀವು ಕೊಡಿ. ನಾವು ರಿಲೀಜ್ ಮಾಡಿಕೊಳ್ಳುತ್ತಾ ಹೋಗುತ್ತೇವೆಂದು ಹೇಳಿ. ಸ್ವಲ್ಪ ಅಡ್ವಾನ್ಸ್ ಇಟ್ಟಿರಿ, ಡಿಸ್ಟ್ರಿಕ್ಟ್ ಹೆಡ್ ಕ್ವಾಟ್ರಸ್‌ನಲ್ಲಿ ಏನೂ ಆಗುವುದಿಲ್ಲ.

ಶ್ರೀ ಬಂಡೆಪ್ಪ ಕಾಶಂಪುರ : ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಅನ್ನದಾನಿ : ಮಾನ್ಯ ಅಧ್ಯಕ್ಷರೇ,.....

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಏನಾಗಿದೆ ಅಂದರೆ, ಮಾನ್ಯ ಡಿ.ಆರ್. ಪಾಟೀಲರು ಹೇಳತಕ್ಕಂಥ ಕಾಲದಲ್ಲಿ ಉಪ ಮುಖ್ಯಮಂತ್ರಿಗಳು ಗದಗ್‌ಗೆ ಬೀಗಸ್ಥನ ಮಾಡಿದ್ದಾರೆ. ಆಕ್ಟ್‌ಯಲಿ ಸಹಾಯ ಮಾಡುತ್ತೇನೆಂದು ಹೇಳಿದ್ದಾರೆ. ಇದು ಪರಿಣಾಮವಾಗಿದೆ.

(ಉ) ವಿಷಯ : ಒಂದನೇ ತರಗತಿಯಿಂದ ಆಂಗ್ಲಭಾಷೆಯನ್ನು ಕಲಿಸುವ ಬಗ್ಗೆ.

ಡಾ: ಕೆ. ಅನ್ನದಾನಿ (ಮಳವಳ್ಳಿ) : ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ. ಒಂದನೇ ತರಗತಿಯಿಂದ ಇಂಗ್ಲೀಷ್ ಭಾಷೆಯನ್ನು ಎಲ್ಲಾ ಶಾಲೆಗಳಲ್ಲೂ ಕೂಡ ಕಲಿಸಬೇಕು ಎನ್ನತಕ್ಕಂಥಾದ್ದು ಬಹಳ ದಿನಗಳ ಒಂದು ಬೇಡಿಕೆಯಾಗಿದೆ. ಆದರೆ ಇದರ ಬಗ್ಗೆ ಸರ್ಕಾರ ಇನ್ನೂ ಕೂಡ ಯಾವುದೇ ರೀತಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ಬಹುಶಃ ಈ ವಿಚಾರವಾಗಿ ರೈತರ ಮಕ್ಕಳ ಭವಿಷ್ಯ ಅಡಗಿದೆ. ಹಿಂದುಳಿದ ವರ್ಗದ ಮಕ್ಕಳ ಭವಿಷ್ಯ ಅಡಗಿದೆ, ದಲಿತ ಮಕ್ಕಳ ಭವಿಷ್ಯ ಅಡಗಿದೆ. ಒಟ್ಟಾರೆಯಾಗಿ ಗ್ರಾಮೀಣ ಪ್ರದೇಶದ ಎಲ್ಲಾ ಮಕ್ಕಳ ಭವಿಷ್ಯ ಅಡಗಿದೆ. ಅವರ ಬದುಕು, ಜೀವನ ಎಲ್ಲವೂ ಕೂಡ ಇದರಲ್ಲಿ ಅಡಗಿದೆ. ನಾನು ಬಹಳ ಮುಖ್ಯವಾಗಿ ಹೇಳತಕ್ಕಂಥಾದ್ದು ಏನೆಂದರೆ ನಾನು ಕಳೆದ ಅಧಿವೇಶನದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಇವತ್ತಿನವರೆಗೂ ಕೂಡ ಸರ್ಕಾರ ಅದರ ಬಗ್ಗೆ ಯಾವುದೇ ರೀತಿಯಾದ ಕ್ರಮವನ್ನು ತೆಗೆದುಕೊಳ್ಳದೇ ಇರತಕ್ಕಂಥಾದ್ದು ನಿಜವಾಗಲೂ ಕೂಡ ನಮಗೆ ನೋವನ್ನು ತರತಕ್ಕಂಥ ವಿಚಾರ. ಬಹುಶಃ ಒಂದೇ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಸರ್ಕಾರಿ ಶಾಲೆಗಳು, ಸರ್ಕಾರಿ ಕನ್ನಡ ಶಾಲೆಗಳು ಮಾಧ್ಯಮ ಶಾಲೆಗಳು ಇವತ್ತು ಏನಾದರೂ ಉಳಿಸಬೇಕು, ಉಳಿದುಕೊಳ್ಳಬೇಕು ಅಂದರೆ ಕನ್ನಡ ಮಾಧ್ಯಮ ಸರ್ಕಾರಿ ಶಾಲೆಗಳಲ್ಲಿ ಕಡ್ಡಾಯವಾಗಿ ಇಂಗ್ಲೀಷ್ ಭಾಷೆಯನ್ನು ಈ ವರ್ಷದಿಂದ ಕಲಿಸಿದರೆ ಮಾತ್ರ ಶಾಲೆಗಳು ಉಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ನನ್ನ ಕ್ಷೇತ್ರದಲ್ಲಿ ಒಂದೇ ಒಂದು ಗ್ರಾಮ ಚಿಕ್ಕಂದೊಡ್ಡಿ ಅಂತ ಹೇಳಿ ಇದೆ ಅಲ್ಲಿ 50 ಮನೆಗಳು ಇದೆ. 50 ಮನೆಗಳಲ್ಲಿ ಸರ್ಕಾರಿ ಶಾಲೆಗೆ ಬರತಕ್ಕಂಥ ಮಗು ಒಂದೇ ಒಂದು. ಈ ವರ್ಷ ಪ್ರವೇಶ ಪಡೆದುಕೊಂಡಿರತಕ್ಕಂಥಾದ್ದು,

ಇನ್ನು ಉಳಿದ ಮಕ್ಕಳೂ ಕೂಡ ಮಳವಳ್ಳಿ ಪಟ್ಟಣಕ್ಕೆ ಆಂಗ್ಲಭಾಷೆ ಕಲಿಯುವುದಕ್ಕೆ ಇಂಗ್ಲೀಷ್ ಮಾಡ್ಯಿಯಂ ಶಾಲೆಗೆ ಹೋಗುತ್ತಾ ಇರತಕ್ಕಂಥಾದ್ದನ್ನು ನಾವು ಕಾಣುತ್ತೇವೆ. ಆದ್ದರಿಂದ ಈ ವರ್ಷದಿಂದಲೇ ಆ ಶಾಲೆಯನ್ನು ಮುಚ್ಚಬೇಕು ಅಂತ ಹೇಳಿ ಸರ್ಕಾರ ಆದೇಶ ಮಾಡಿದೆ. ಸರ್ಕಾರ ಆದೇಶವನ್ನು ಮಾಡಿದಂತಹ ಸಂದರ್ಭದಲ್ಲಿ ಇವತ್ತು ಸರ್ಕಾರಿ ಶಾಲೆಗಳನ್ನು ಉಳಿಸಬೇಕು ಅಂದರೆ ನೀವು ಕನ್ನಡ ಶಾಲೆಗಳಲ್ಲಿ ಇಂಗ್ಲೀಷ್ ಭಾಷೆಯನ್ನು ಜಾರಿ ಮಾಡಲಿಲ್ಲ ಅಂದರೆ ಆ ಭಾಷೆಯನ್ನು ಇವತ್ತು ತರಲಿಲ್ಲ ಅಂದರೆ ಮುಂದಿನ ದಿನಗಳಲ್ಲಿ ಇವತ್ತು ಒಂದು ಶಾಲೆಯನ್ನು ಮುಚ್ಚುತ್ತಿದ್ದಾರೆ ಇಡೀ ರಾಜ್ಯದ ಕನ್ನಡ ಸರ್ಕಾರಿ ಮಾಧ್ಯಮ ಶಾಲೆಗಳನ್ನು ಮುಚ್ಚಬೇಕಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನಮ್ಮ ಪ್ರಸಿದ್ಧ ಕನ್ನಡ ಸಾಹಿತಿಗಳೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮುಖ್ಯಮಂತ್ರಿಗಳ ಗೃಹ ಕಛೇರಿ ಮುಂದೆ ಧರಣಿ ಕೂಡ ಮಾಡಿದ್ದಾರೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇಂಗ್ಲೀಷ್‌ಅನ್ನು ಇವತ್ತು ಎಲ್ಲಾ ಶಾಲೆಗಳಲ್ಲೂ ಕೂಡ ಇಂಟ್ರಡ್ಯೂಸ್ ಮಾಡಬೇಕು ಎನ್ನುವ ಬೇಡಿಕೆಯನ್ನು ಇಟ್ಟಿದ್ದಾರೆ. ಇವತ್ತು ಎಲ್ಲಾ ವರ್ಗದಲ್ಲೂ ಕೂಡ ಗ್ರಾಮೀಣ ಪ್ರದೇಶದಲ್ಲಿ ಇಂಗ್ಲೀಷ್‌ನ್ನು ಕಲಿಸಬೇಕು ಎನ್ನತಕ್ಕಂಥ ಒತ್ತಡ ಬರುತ್ತಿದೆ. ಆದರೆ ಸರ್ಕಾರದ ಸಂಪುಟ ಸಭೆಯ ಮುಂದೆ ಈ ವಿಷಯವನ್ನು ಇಟ್ಟು ಆಗಿದೆ. ಆದರೆ ಇವತ್ತಿಗೂ ಕೂಡ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಕೂಡಲೇ ಇದರ ಬಗ್ಗೆ ಸರ್ಕಾರ ಗಮನಹರಿಸಿ ಕನ್ನಡ ಮಾಧ್ಯಮ ಸರ್ಕಾರಿ ಶಾಲೆಗಳಲ್ಲಿ ಎಲ್ಲಾ ಶಾಲೆಗಳಲ್ಲೂ ಕೂಡ ಇಂಗ್ಲೀಷ್ ಭಾಷೆಯನ್ನು ಇವತ್ತು ನಾವು ಮಾಧ್ಯಮ ಮಾಡಿ ಎಂದು ಕೇಳುತ್ತಿಲ್ಲ. ಇಂಗ್ಲೀಷ್ ಭಾಷೆ. ಇಂಗ್ಲೀಷ್ ಭಾಷೆ ಕಲಿಯಲಿಲ್ಲವೆಂದರೆ ಸಿಇಟಿ ಪರೀಕ್ಷೆ ಬರೆಯುವುದಕ್ಕೆ ಆಗುವುದಿಲ್ಲ ನಮ್ಮ ಗ್ರಾಮೀಣ ಪ್ರದೇಶದ ಮಕ್ಕಳು. ಅವರು ಇಂಜಿನೀಯರಿಂಗ್ ಮೆಡಿಕಲ್ ಉನ್ನತ ವಿದ್ಯಾಭ್ಯಾಸ ಮಾಡಲಿಕ್ಕೆ ಹೇಗೆ ಸಾಧ್ಯವಾಗುತ್ತದೆ. ದಯಮಾಡಿ ಸಮಾನವಾದ ಶಿಕ್ಷಣವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಾಗುತ್ತದೆ. ದಯಮಾಡಿ ಕೂಡಲೇ ಸರ್ಕಾರ ಯಾವುದಾದರೂ ಒಂದು ನಿರ್ಧಾರವನ್ನು ತಕ್ಷಣ ಪ್ರಕಟಿಸಬೇಕು. ಮಾಡುತ್ತೇವೆ. ಇಲ್ಲ ಅಂದರೆ, ಮಾಡುವುದಿಲ್ಲ ಎನ್ನತಕ್ಕಂಥ ಒಂದು ವಿಚಾರವನ್ನು ಪ್ರಕಟ ಮಾಡಲಿಲ್ಲವೆಂದರೆ ಗ್ರಾಮೀಣ ಪ್ರದೇಶದ ಜನರು ನಿಮ್ಮನ್ನು ಕ್ಷಮಿಸುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿಸುತ್ತೇನೆ. ದಯಮಾಡಿ ಕೂಡಲೇ ಎಲ್ಲಾ ಶಾಲೆಗಳಲ್ಲೂ ಈ ವರ್ಷದಿಂದಲೇ ಪ್ರಾರಂಭ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, ಈ ಅಧಿವೇಶನದಲ್ಲಿ ಮತ್ತು ಹೊರಗಡೆ ಕೂಡ ಈ ವಿಷಯದ ಬಗ್ಗೆ ತೀಕ್ಷ್ಣ ಚರ್ಚೆ, ವಾದ–ಪ್ರತಿವಾದ ಇವೆಲ್ಲಾ ನಡೆದಿದೆ. ಪ್ರಾಥಮಿಕ ಶಿಕ್ಷಣ ಸಚಿವರು ಈಗ ಊರಿನಿಂದ ಬರುತ್ತಾ ಇದ್ದಾರೆ, ನನಗೆ ಈಗತಾನೇ ಮೆನೇಜ್ ಬಂತು. ಆ ಕಾರಣಕ್ಕಾಗಿ ದಯವಿಟ್ಟು ನಾಳೆ ಈ ವಿಚಾರ ತೆಗೆದುಕೊಂಡರೆ ಸಚಿವರು ಇದಕ್ಕೆ ಸಮಂಜಸ ಉತ್ತರವನ್ನು ಕೊಡುತ್ತಾರೆ. ನಾಳೆ ಇದನ್ನು ತರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.